# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : Grid Interactive Hybrid Solar Roof Top Power plants ಅಳವಡಿಕೆಗೆ ಸಂಬಂಧಿಸಿದಂತೆ, ಮೊದಲನೆ ಹಂತದ ಟೆಂಡರ್ ನಲ್ಲಿ ಯಶಸ್ವಿಯಾಗಿರುವ ಅರ್ಹ ಗುತ್ತಿಗೆದಾರರು , ಬಿಡ್ ದಾಖಲೆಗಳೊಂದಿಗೆ ಸಲ್ಲಿಸಿದ್ದ ವಿವಿಧ ಸಂಸ್ಥೆಗಳ ಉಪಕರಣಗಳನ್ನು ಬಳಸಿಕೊಳ್ಳಲು ಅನುಮತಿಸುವ ಬಗ್ಗೆ

ಓದಲಾಗಿದೆ :
1. ಅಧಿಸೂಚನೆ ಸಂ:RDPR/12/BGS/2020 ದಿನಾಂಕ:18-04-2020
2. ಅಧಿಸೂಚನೆ ಸಂ:RDPR/12/BGS/2020(2nd Stage) ದಿನಾಂಕ:20-07-2020
3. LoA ಪತ್ರ ಸಂ: KPRC/DD-4/BGS/22/2020 ದಿನಾಂಕ:22-10-2020

ಪ್ರಸ್ತಾವನೆ:

ಓದಲಾದ(1) ಮತ್ತು (2) ಗಳಲ್ಲಿ 2020-21 ಮತ್ತು 2021-22 ನೇ ಸಾಲಿಗೆ ಸಂಬಂಧಿಸಿದಂತೆ, ಸರ್ಕಾರದ ಗ್ರಾಅಪ ಇಲಾಖೆಯ ಅಧೀನದಲ್ಲಿ ಬರುವ ಇಲಾಖಾ ಕಛೇರಿಗಳು, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಅಧೀನದಲ್ಲಿ ಬರುವ ಕಛೇರಿಗಳು, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಲ್ಲಿ Grid Interactive Hybrid Solar Roof Top Power plants ಗಳನ್ನು ಅಳವಡಿಸಲು ಕೆ.ಟಿ.ಪಿ.ಪಿ ನಿಯಮಗಳನ್ವಯ ಎರಡು ಹಂತಗಳಲ್ಲಿ ಇ-ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಟೆಂಡರ್ ನೆಗೋಷಿಯೇಷನ್ ಕಮಿಟಿ ಹಾಗೂ ಟೆಂಡರ್ ಅಂಗೀಕರಿಸುವ ಸಮಿತಿಯ ಅನುಮೋದನೆಯನ್ವಯ 05 ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಿ ಓದಲಾದ(3) ರಂತೆ,Letter of Acceptance(LoA) ನೀಡಲಾಗಿರುತ್ತದೆ.

ಸೋಲಾರ್ ವಿದ್ಯುತ್ ಘಟಕದ ಉಪಕರಣಗಳ Demonstration ಸಂದರ್ಭದಲ್ಲಿ, ಗುತ್ತಿಗೆದಾರರ ಸಂಸ್ಥೆಗಳು ಹಾಜರುಪಡಿಸಿದ್ದ ಉಪಕರಣಗಳನ್ನು ಮಾತ್ರ ಅನುಮೋದಿಸಿ, ಅದರನ್ವಯ Letter of Acceptance ಅನ್ನು ನೀಡಲಾಗಿದ್ದು, ಪ್ರಸ್ತುತ, ಗುತ್ತಿಗೆದಾರ ಸಂಸ್ಥೆಗಳು ಯೋಜನೆಗೆ ಸಂಬಂಧಿಸಿದ ಅನುಮೋದಿತ ಉಪಕರಣಗಳನ್ನು ನಿಗದಿತ ಅವಧಿಯೊಳಗೆ ಸರಬರಾಜುದಾರರು ಪೂರೈಕೆ ಮಾಡದಿರುವ ಕಾರಣ, ಕಾರ್ಯಕ್ರಮ ಅನುಷ್ಠಾನಗೊಳಿಸಲು ವಿಳಂಬವಾಗುತ್ತಿದ್ದು, ಇತರೆ ಅಂಗೀಕೃತ ಸರಬರಾಜುದಾರರಿಂದ ಸೋಲಾರ್ ಘಟಕಕ್ಕೆ ಸಂಬಂಧಿಸಿದ ಉಪಕರಣಗಳನ್ನು ಬಳಸಿಕೊಳ್ಳಲು ಅವಕಾಶ ನೀಡುವಂತೆ ಕೋರಿ ಇಲಾಖೆಗೆ ಮನವಿಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, Letter of Acceptance ಪಡೆದಿರುವ ಅರ್ಹ ಗುತ್ತಿಗೆದಾರ ಸಂಸ್ಥೆಗಳ ಮನವಿಗಳನ್ನು ಪರಿಗಣಿಸಿ, ನಿಗದಿತ ಕಾಲಾವಧಿಯೊಳಗಾಗಿ ಹಾಗೂ ಉಪಕರಣಗಳ ವಿನ್ಯಾಸ ಮತ್ತು ಗುಣಮಟ್ಟದಲ್ಲಿ ಯಾವುದೇ ವ್ಯತ್ಯಯವಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾದ ನಿಟ್ಟಿನಲ್ಲಿ, ಟೆಂಡರ್ ಪ್ರಕ್ರಿಯೆಯ ಮೊದಲ ಹಂತದಲ್ಲಿ ಅರ್ಹ ಗುತ್ತಿಗೆದಾರರು ಸೋಲಾರ್ ವಿದ್ಯುತ್ ಘಟಕದ ಉಪಕರಣಗಳ ಸರಬರಾಜಿಗಾಗಿ ಸಲ್ಲಿಸಿದ್ದ Manufacturer's Authorization Form(MAF) ಹೊಂದಿರುವ ಉಪಕರಣಗಳ ಪೈಕಿ, Demonstration Committee ಯು ಅನುಮೋದಿಸಿರುವ ಉಪಕರಣಗಳನ್ನು ಎಲ್ಲಾ ಅರ್ಹ ಗುತ್ತಿಗೆದಾರ ಸಂಸ್ಥೆಗಳು ಬಳಸಿಕೊಳ್ಳುವುದಕ್ಕಾಗಿ ಅವಕಾಶ ನೀಡಲು ಸರ್ಕಾರವು ತೀರ್ಮಾನಿಸಿದ್ದು, ಪ್ರಯುಕ್ತ ಈ ಆದೇಶ:

ಸರ್ಕಾರದ ಆದೇಶ ಸಂ: ಕೆಪಿಆರ್‌ಸಿ/ಡಿಡಿ4/ಬಿಜಿಎಸ್/28/2021

ಬೆಂಗಳೂರು, ದಿನಾಂಕ: 12.05.2021

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, Grid Interactive Hybrid Solar Roof Top Power plants ಗಳ ಅಳವಡಿಕೆಗೆ ಸಂಬಂಧಿಸಿದಂತೆ, ಈಗಾಗಲೇ Letter of Acceptance ಪಡೆದಿರುವ ಅರ್ಹ ಗುತ್ತಿಗೆದಾರ ಸಂಸ್ಥೆಗಳು, ಅನುಬಂಧದಲ್ಲಿ ನಮೂದಿಸಿರುವ ಇತರೆ ಸರಬರಾಜುದಾರ ಸಂಸ್ಥೆಗಳ ಸೋಲಾರ್ ವಿದ್ಯುತ್ ಘಟಕದ ಉಪಕರಣಗಳನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಬಳಸಿಕೊಳ್ಳಲು ಅನುಮೋದಿಸಲಾಗಿದೆ:

1. ಮೊದಲನೆ ಹಂತದ ಟೆಂಡರ್ ನಲ್ಲಿ ಸೂಚಿಸಿದ್ದ ಸೋಲಾರ್ ವಿದ್ಯುತ್ ಘಟಕಗಳ ಉಪಕರಣಗಳಿಗೆ ಸಂಬಂಧಿಸಿದ ತಾಂತ್ರಿಕ ವಿನ್ಯಾಸಗಳನ್ನು ಕಡ್ಡಾಯವಾಗಿ ಅನುಸರಿಸತಕ್ಕದ್ದು ಹಾಗೂ ಅರ್ಹ ಟೆಸ್ಟ್ ಲ್ಯಾಬ್ ಗಳಿಂದ ಪಡೆದ ಎಲ್ಲಾ ತಾಂತ್ರಿಕ ಪ್ರಮಾಣಪತ್ರಗಳನ್ನು ಸಲ್ಲಿಸತಕ್ಕದ್ದು.
2. ಮೊದಲನೆ ಹಂತದ ಟೆಂಡರ್ ಬಿಡ್ ನಲ್ಲಿ ಎಲ್ಲಾ ಅರ್ಹ ಗುತ್ತಿಗೆದಾರರು ಸಲ್ಲಿಸಿರುವ ಪೈಕಿ Demonstration Committee ಯಿಂದ ಅನುಮೋದಿಸಲ್ಪಟ್ಟಿರುವ ಸೋಲಾರ್ ವಿದ್ಯುತ್ ಘಟಕದ ಉಪಕರಣಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು, ಸಂಬಂಧಿತ ಸಂಸ್ಥೆಗಳಿಂದ Manufacturer's Authorization Form (MAF) ಅನ್ನು ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
3. ಈಗಾಗಲೇ, ಮೊದಲನೆ ಹಂತದ ಟೆಂಡರ್ ನಲ್ಲಿ ನಿಗದಿಗೊಳಿಸಿರುವ ದರಪಟ್ಟಿಯು ಅಂತಿಮವಾಗಿರುತ್ತದೆ.

4. ಇತರ ಅಂಗೀಕೃತ ಸರಬರಾಜದಾರ ಸಂಸ್ಥೆಗಳ ಉಪಕರಣಗಳನ್ನು ಬಳಸಿಕೊಳ್ಳುವ ಬಗ್ಗೆ ಗುತ್ತಿಗೆದಾರರು ಮತ್ತು ಸೋಲಾರ್ ವಿದ್ಯುತ್ ಘಟಕದ ಉಪಕರಣಗಳ ತಯಾರಿಕಾ ಸಂಸ್ಥೆಗಳು ಮಾತ್ರವೇ ಜವಾಬ್ದಾರಿಯಾಗಿದ್ದು, ಇದರಲ್ಲಿ ಇಲಾಖೆಯು ಯಾವುದೇ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ.
5. ಗುತ್ತಿಗೆದಾರರು ಉಪಯೋಗಿಸಲು ಇಚ್ಛಿಸುವ ಸೋಲಾರ್ ಘಟಕದ ಉಪಕರಣಗಳು, **Hybrid Inverter** ನೊಂದಿಗೆ ತಾಂತ್ರಿಕ ಹೊಂದಾಣಿಕೆ ಹೊಂದಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು
6. ಉಪಕರಣಗಳ ಪೂರೈಕೆಗೆ ಸಂಬಂಧಿಸಿದಂತೆ, ತಾಂತ್ರಿಕ ವಿನ್ಯಾಸದಲ್ಲಿ ಲೋಪದೋಷ ಕಂಡುಬಂದಲ್ಲಿ, ಸರಬರಾಜು ಸಂಸ್ಥೆಗಳು ಹಾಗೂ ಗುತ್ತಿಗೆದಾರರು ನೇರವಾಗಿ ಜವಾಬ್ದಾರರಾಗಿರುತ್ತಾರೆ.
7. ಮೇಲಿನ ಷರತ್ತುಗಳನ್ನು ಗುತ್ತಿಗೆದಾರರಾಗಲೀ ಅಥವಾ ತಯಾರಿಕಾ ಸಂಸ್ಥೆಗಳಾಗಲೀ ಉಲ್ಲಂಘಿಸಿದಲ್ಲಿ, ಇಲಾಖೆಯು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ.

B. Naveenkumar
(ನವೀನ್ ಕುಮಾರ್.ಬಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಎಲ್ಲಾ ಗ್ರಾಮ ಪಂಚಾಯತ್ ನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
3. ಮೊದಲನೆ ಹಂತದ ಟೆಂಡರ್ ನಲ್ಲಿ ಅರ್ಹರಾಗಿರುವ ಗುತ್ತಿಗೆದಾರ ಸಂಸ್ಥೆಗಳಿಗೆ ಅಗತ್ಯ ಕ್ರಮಕ್ಕಾಗಿ

<u>ಮಾಹಿತಿಗಾಗಿ ಪ್ರತಿಯನ್ನು:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳಿಗೆ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) , ಗ್ರಾಅಪ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳಿಗೆ
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಗ್ರಾಅಪ ಇಲಾಖೆ, ಇವರ ಆಪ್ತ ಸಹಾಯಕರಿಗೆ

# ಅನುಬಂಧ

| Sl No | Name of Bidder firm | Details of components demonstrated and apporoved in LoA | | | |
|---|---|---|---|---|---|
| | | Solar Modules | Solar Hybrid Inverters | Tubular Batteries | AJB, DCDB & ACDB |
| 1 | M/s Greensol Renewable Power Pvt Ltd | Emmvee photovoltaic | Power-one 1KW,2KW,3KW, 4KW,5KW,10KW | Primetech: 12V120AH, 12V130AH, 12V150AH, 12V-200AH | GreenSol |
| 2 | M/s Power One Microsystems Pvt Ltd., | Jyotitech | Power-one 1KW,2KW,3KW, 4KW,5KW,10KW | Primetech: 12V120AH, 12V130AH, 12V150AH, 12V-200AH | PowerOne |
| 3 | M/s Inkel Ltd., | Topsun | Power-one 1KW,2KW,3KW, 4KW,5KW,10KW | Relicell: 12V120AH, 12V130AH, 12V150AH, 12V-200AH | PowerOne |
| 4 | M/s Nuetech Solar Systems Pvt Ltd., | HHV | Power-one 1KW,2KW,3KW, 4KW,5KW,10KW | Primetech: 12V120AH, 12V130AH, 12V150AH, 12V-200AH | PowerOne |
| 5 | M/s Sri Savitr Solar Pvt Ltd | Sri Savitr | Power-one 1KW,2KW,3KW, 4KW,5KW,10KW | Primetech: 12V120AH, 12V130AH, 12V150AH, 12V-200AH | PowerOne |

Note: SECURE- Netmeter is common for all above

B. Naveenkumar
(ನವೀನ್ ಕುಮಾರ್.ಬಿ)

ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.